## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಹೆಚ್.ಕೆ.ಪ್ರಕಾಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ,ತುರುವೇಕೆರೆ (ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು) ತುರುವೇಕೆರೆ, ಜಿ.ಪಂ.ವಿಭಾಗ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ ಆದೇಶ.

ಓದಲಾಗಿದೆ:-ಮಾನ್ಯ ಉಪ ಲೋಕಾಯುಕ್ತರು, ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿ ಸಲ್ಲಿಸಿರುವ ವರದಿ ಸಂಖ್ಯೆ: ಕಂಪ್ಲೆಂಟ್/ ಉಪಲೋಕ್/ಬಿಡಿ/8068/ 2015/ಎಆರ್‌ಎಲ್-01, ದಿ:23-03-2017.

-000-

ಪ್ರಸ್ತಾವನೆ:

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ದಿನಾಂಕ:07-03-2017 ಅ.ಸ.ಪತ್ರದಲ್ಲಿ ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರ ದಿನಾಂಕ: 28-02-2017ರ ವರದಿ ಮತ್ತು ಇತರೆ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸುತ್ತಾ, ಸರ್ಕಾರದ ನಿರ್ಣಯವನ್ನು ಲೋಕಾಯುಕ್ತ ಕಛೇರಿಗೆ ಸಲ್ಲಿಸಲು ಶಿಫಾರಸ್ಸು ಮಾಡಿರುತ್ತಾರೆ.

ಶ್ರೀ ಕೆಂಪೇಗೌಡ ಬಿನ್ ಗಂಡಾಳಗೌಡ, ಅಮ್ಮಸಂದ್ರ, ದಂಡಿನಶಿವರ ಹೋಬಳಿ, ತುರುವೇಕೆರೆ ತಾಲ್ಲೂಕು ಮತ್ತು ಅಮ್ಮಸಂದ್ರ ಗ್ರಾಮಸ್ಥರು ನೀಡಿದ ದೂರಿನಲ್ಲಿ (1) ಶ್ರೀ ರಮೇಶ್, ತಹಶೀಲ್ದಾರ್ (2) ಶ್ರೀ ಮಹಾಲಿಂಗಪ್ಪ, ಕಾರ್ಯನಿರ್ವಾಹಕ ಅಧಿಕಾರಿ ತಾ.ಪಂ. (3) ಶ್ರೀ ಶಿವರುದ್ರಪ್ಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬ್ಯಾಲೆ ಗ್ರಾಮ ಪಂಚಾಯಿತಿ ಇವರುಗಳ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

ದೂರಿನ ಸಂಕ್ಷಿಪ್ತ ವಿವರಣೆ:-

(ಅ) ದೂರುದಾರರು ತಮ್ಮ ದೂರಿನಲ್ಲಿ ದಂಡಿನಪುರ ಗ್ರಾಮದಲ್ಲಿ ಗ್ರಾಮಲೆಕ್ಕಿಗರ ವಸತಿ ಗೃಹದ ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭಿಸಿ, ಬಹಳಷ್ಟು ಕೆಲಸ ಮಾಡಿ ಕಟ್ಟಡದ ಕಾರ್ಯವನ್ನು ಪೂರ್ಣಗೊಳಿಸದೆ ಸುಮಾರು ವರ್ಷಗಳಿಂದ ಹಾಗೆ ಬಿಟ್ಟಿರುವುದರಿಂದ, ವಸತಿಗೃಹಗಳಿದ್ದು ಉಪಯೋಗಕ್ಕೆ ಬಾರದಂತಾಗಿರುತ್ತದೆ, ಕಟ್ಟಡವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕೆಂದು ದೂರನ್ನು ಸಲ್ಲಿಸಿರುವ ಬಗ್ಗೆ ವರದಿಸಿರುತ್ತಾರೆ. ಪ್ರಾಥಮಿಕ ತನಿಖೆಯಿಂದ ರೂ.2,00,000/-ಗಳನ್ನು 2003-04ರಲ್ಲಿ ತಾಲ್ಲೂಕು ಪಂಚಾಯತಿ ಯಿಂದ ಗ್ರಾಮಲೆಕ್ಕಿಗರ ವಸತಿ ಗೃಹ ನಿರ್ಮಾಣಕ್ಕೆ ಬಿಡುಗಡೆಗೊಳಿಸಿದ್ದು, ರೂ.1,41,642/- ಹಣವನ್ನು ಖರ್ಚು ಮಾಡಿರುತ್ತಾರೆ. ಆದಾಗ್ಯೂ ಕಟ್ಟಡ ಪೂರ್ಣಗೊಂಡಿರುವುದಿಲ್ಲ.

(ಆ) ದಿ:30-01-2008ರ ಆದೇಶದಲ್ಲಿ ಮುಖ್ಯ ಅಭಿಯಂತರರು, ತಾಂತ್ರಿಕ ಮತ್ತು ಲೆಕ್ಕ ಕೋಶ, ಕರ್ನಾಟಕ ಲೋಕಾಯುಕ್ತ ರವರಿಂದ ತನಿಖೆಯನ್ನು ಕೈಗೊಂಡು ವರದಿಸಿರುತ್ತಾರೆ. ಮುಖ್ಯ ಅಭಿಯಂತರರು ದಿ:31-3-2016 ರಲ್ಲಿ ವರದಿಯನ್ನು ಸಲ್ಲಿಸಿದ್ದು, ಸಹಾಯಕ ಕಾರ್ಯಪಾಲಕ ಇಂಜಿನಿಯರ್-01,ತಾಂತ್ರಿಕ ಮತ್ತು ಲೆಕ್ಕಕೋಶ, ಇವರು ತನಿಖಾಧಿಕಾರಿ ಗಳಾಗಿದ್ದು, ತನಿಖಾ ವರದಿಯ ಪ್ರಮುಖ ಅಂಶಗಳು ಕೆಳಕಂಡಂತೆ ಇರುತ್ತವೆ.

(i) ದಂಡಿನಸಿವರ ಗ್ರಾಮಲೆಕ್ಕಿಗರ ವಸತಿ ಕಟ್ಟಡ ನಿರ್ಮಾಣಕ್ಕೆ ರೂ.2,00,000/- ಗಳ ಅಂದಾಜು ವೆಚ್ಚವು ಜಿಲ್ಲಾಧಿಕಾರಿ, ತುಮಕೂರು ರವರಿಂದ ಆಡಳಿತಾತ್ಮಕ ಅನುಮೋದನೆಯು 2003-04ರಲ್ಲಿ ದೊರೆತು ಮತ್ತು ತಾಂತ್ರಿಕವಾಗಿ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಇ.ವಿಭಾಗ, ತುಮಕೂರು ರವರಿಂದ 2003-04 ರಲ್ಲಿ ಆಗಿರುತ್ತದೆ.

(ii) ಕಾರ್ಯ ಪ್ರಾರಂಭವಾಗಿ ರೂ.1,41,649/- ಗಳ ಭಾಗಶ ಬಿಲ್ಲನ್ನು ಕಾರ್ಯನಿರ್ವಾಹಕ ಅಧಿಕಾರಿ, ತಾ.ಪಂ. ತುರುವೇಕೆರೆ ರವರು ಬಿಡುಗಡೆ ಗೊಳಿಸಿರುತ್ತಾರೆ.

(iii) 2003-04 ರಲ್ಲಿ ಕಾರ್ಯ ಪೂರ್ಣಗೊಳ್ಳದೆ ಲಿಂಟಲ್ ಲೆವೆಲ್ ವರೆಗೆ ಮಾತ್ರ ಪೂರ್ಣಗೊಂಡಿರುತ್ತದೆ.

(iv) ಬಾಕಿ ಕಾಮಗಾರಿಯನ್ನು ಪೂರ್ಣಗೊಳಿಸಲು 2010-11 ರಲ್ಲಿ ತುಂಡು ಗುತ್ತಿಗೆ ಕೆಲಸದ ಆಧಾರದ ಮೇಲೆ ಪೂರ್ಣಗೊಳಿಸಲು ರೂ.1,70,000/- ಗಳನ್ನು ಅಂದಾಜಿಸಲಾಗಿದ್ದು, ಸಕ್ಷಮ ಪ್ರಾಧಿಕಾರದಿಂದ ಈ ಬಗ್ಗೆ ಯಾವುದೇ ಅನುಮತಿಯನ್ನು ಪಡೆದಿರುವುದಿಲ್ಲ.

(v) ರೂ.1,60,000/-ಗಳ ವೆಚ್ಚದ ವಿವರವನ್ನು ಇರಿಸದೆ ಹಾಗೂ ಕಾರ್ಯಪೂರ್ಣಗೊಳಿಸದೆ, ಬಾಕಿ ಕೆಲಸ ಪೂರ್ಣಗೊಳಿಸಲು ಹೆಚ್ಚುವರಿಯಾಗಿ ರೂ.1,10,000/- ಗಳನ್ನು ಬಾಕಿ ಕಾಮಗಾರಿ ಪೂರ್ಣಗೊಳಿಸಲು ಅಂದಾಜನ್ನು ಪುನ: ಸಿದ್ಧಪಡಿಸಿರುತ್ತಾರೆ.

(vi) 2010-11 ರಲ್ಲಿ ಬಾಕಿ ಕಾಮಗಾರಿ ಅನುದಾನ ಬಿಡುಗಡೆಗೊಳಿಸದೆ, 2016 ರಲ್ಲಿ ಬಾಕಿ ಕಾಮಗಾರಿ ಪೂರ್ಣಗೊಳಿಸಲು ರೂ.3,00,000/-ಗಳನ್ನು ಅಂದಾಜಿಸಿರುವ ಬಗ್ಗೆ ವರದಿಸಿರುತ್ತಾರೆ.

(ಇ) 2010-11ರಲ್ಲಿ ರೂ.1,10,000/-ಗಳು ಬಿಡುಗಡೆಗೊಳಿಸದೆ 2016 ರಲ್ಲಿನ ಅಂದಾಜು ಬೇಡಿಕೆಯಂತೆ ರೂ.3,00,000/-ಗಳನ್ನು ಬಿಡುಗಡೆಗೊಳಿಸಲು ಯೋಜನೆ ರೂಪಿಸಿರುತ್ತಾರೆ. 2003-04 ರಿಂದ 2010-11 ರವರೆಗೆ ಕಾರ್ಯ ನಿರ್ವಹಿಸಿರುವ ಸಹಾಯಕ ಇಂಜಿನಿಯರ್/ಕಿರಿಯ ಇಂಜಿನಿಯರ್/ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಿ.ಆರ್.ಇ. ಉಪ ವಿಭಾಗ ಮತ್ತು ಕಾರ್ಯನಿರ್ವಾಹಕ ಅಧಿಕಾರಿ, ತಾ.ಪಂ. ತುರುವೇಕೆರೆ ಇವರೆಲ್ಲರೂ ಸಹ ಸದರಿ ಕಾಮಗಾರಿ ಪೂರ್ಣಗೊಳ್ಳದೆ ಮೂಲ ಮತ್ತು ಹೆಚ್ಚುವರಿ ಅಂದಾಜು ವೆಚ್ಚವಾಗಲು ಕಾರಣರಾಗಿರುತ್ತಾರೆಂದು ವರದಿಸಿರುತ್ತಾರೆ.

(ಈ) ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ತುರುವೇಕೆರೆ ರವರು ಕಾರ್ಯ ನಿರ್ವಾಹಣಾಧಿಕಾರಿಗಳು, ತಾ.ಪಂ. ತುರುವೇಕೆರೆ ರವರಿಗೆ ಕಾಮಗಾರಿಗೆ ಹಣ ಮಂಜೂರು ಮಾಡಿ ಕಟ್ಟಡದ ಕಾಮಗಾರಿಯ ಕೆಲಸ ಲಿಂಟಲ್ ಲೇವಲ್‌ವರೆಗೆ ನಿರ್ಮಿಸಿ, ಪೂರ್ಣಗೊಳಿಸದೆ, ಸರ್ಕಾರದ ಹಣ ರೂ.1,41,642/-ಪಾವತಿಸಿರುವರೆಂದು ವರದಿಸಿರುತ್ತಾರೆ. ಇದರಿಂದ ಸರ್ಕಾರಕ್ಕೆ ರೂ.1,41,642/- ಗಳು ನಷ್ಟವಾಗಿರುವುದಲ್ಲದೆ ಗ್ರಾಮ ಲೆಕ್ಕಿಗರ ವಸತಿಗೃಹಗಳು ಇದ್ದು ಉಪಯೋಗಕ್ಕೆ ಬಾರದಂತಾಗಿರುತ್ತದೆ ಎಂದು ವರದಿಸಿರುತ್ತಾರೆ.

(ಉ) ವರದಿ ಸ್ವೀಕೃತವಾದ ನಂತರ 01 ರಿಂದ 09ನೇ ಎದುರುದಾರರನ್ನು ಗುರುತಿಸಿದ್ದು, ಈ ಕೆಳಕಂಡಂತೆ ವಿವರಿಸಲಾಗಿದೆ.

| ಕ್ರ.ಸಂ | ಎದುರುದಾರರ ಹೆಸರು ಮತ್ತು ವಿವರ | ಎದುರುದಾರರ ಸಂಖ್ಯೆ |
|---|---|---|
| 1 | ಶ್ರೀ ಮರೀಸ್ವಾಮಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಿ.ಆರ್.ಇ, ಕುವೆಂಪುನಗರ, ತುಮಕೂರು ಜಿಲ್ಲೆ | 1 |
| 2 | ಶ್ರೀ ಡಿ.ಪಿ. ನಾಗರಾಜು, ನಿವೃತ್ತ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕುವೆಂಪುನಗರ, ತುಮಕೂರು ಜಿಲ್ಲೆ | 2 |
| 3 | ಶ್ರೀ ಬಿ.ಜಿ.ಪುರುಷೋತ್ತಮ, ಕಿರಿಯ ಅಭಿಯಂತರರು, ಪಿ.ಆರ್.ಇ, ಉಪ ವಿಭಾಗ,ಚಿಕ್ಕನಾಯಕನಹಳ್ಳಿ, ತುಮಕೂರು ಜಿಲ್ಲೆ | 3 |
| 4 | ಶ್ರೀ ಸಿ.ಎಂ.ಬಸವರಾಜು, ಕಿರಿಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ಒಳಚರಂಡಿ ಉಪ ವಿಭಾಗ, ತುರುವೇಕೆರೆ, ತುಮಕೂರು ಜಿಲ್ಲೆ | 4 |
| 5 | ಶ್ರೀ ವೆಂಕಟೇಶಯ್ಯ,ಉಪನ್ಯಾಸಕರು,ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ | 5 |
| 6 | ಶ್ರೀ ಹೆಚ್.ಎಸ್. ಜಯಕುಮಾರ್,ಅಕ್ಷರ ದಾಸೋಹ, ಬೆಂಗಳೂರು | 6 |
| 7 | ಶ್ರೀ.ಡಿ.ಕೆ.ಲಿಂಗರಾಜು, ಟಿ.ಯು.ಡಿ.ಎ ಆಯುಕ್ತರು, ಕೊಳ್ಳೇಗಾಲ | 7 |
| 8 | ಶ್ರೀ ಜಯಕೃಷ್ಣ, ಜಂಟಿ ನಿರ್ದೇಶಕರು, ಡಿ.ಸಿ.ಕಛೇರಿ, ಚಾಮರಾಜನಗರ | 8 |
| 9 | ಶ್ರೀ ಹೆಚ್.ಕೆ.ಪ್ರಕಾಶ್,ತಾಂತ್ರಿಕ ಸಹಾಯಕರು, ಮುಖ್ಯ ಅಭಿಯಂತ ಕಛೇರಿ, ಶಿವಮೊಗ್ಗ | 9 |

(ಊ) ಇದರಲ್ಲಿ 01 ರಿಂದ 04ನೇ ಎದುರುದಾರರು ಪಿ.ಆರ್.ಇ. ಉಪ ವಿಭಾಗ, ತುರುವೇಕೆರೆ ರವರು ಸದರಿ ಪ್ರಕರಣದ ಲೋಪದೋಷಕ್ಕೆ ಕಾರಣಕರ್ತರಲ್ಲವೆಂದು ತೀರ್ಮಾನಿಸಿ ಪ್ರಕರಣದಿಂದ ಕೈಬಿಡಲಾಗಿದೆ. ಕಾರ್ಯನಿರ್ವಾಹಕ ಅಧಿಕಾರಿ, ತಾ.ಪಂ.ತುರುವೇಕೆರೆ ರವರು ಕಾಮಗಾರಿ ಪೂರ್ಣಗೊಳಸದೆ ಇರುವುದಕ್ಕೆ, ಹೆಚ್ಚುವರಿ ಅಂದಾಜು ವೆಚ್ಚ ಪಟ್ಟಿ ಸಿದ್ಧಪಡಿಸಿರುವುದಕ್ಕೆ ಕಾರಣರಾಗಿರುತ್ತಾರೆ.

(ಋ) 05 ರಿಂದ 07ನೇ ಎದುರುದಾರರು ಈ ಬಗ್ಗೆ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, 08 ಮತ್ತು 09ನೇ ಎದುರುದಾರರು ಯಾವುದೇ ಲಿಖಿತ ಹೇಳಿಕೆ ಸಲ್ಲಿಸಿರುವುದಿಲ್ಲ.

(ೠ) 05 ರಿಂದ 08ನೇ ಎದುರುದಾರರು ಕಾರ್ಯನಿರ್ವಾಹಕ ಅಧಿಕಾರಿ, ತಾ.ಪಂ ಇವರು ದಿ:27-07-2006 ರಿಂದ 30-10-2007; 05-07-2007 ರಿಂದ 05-07-2008; 05-07-2008 ರಿಂದ 01-09-2008 ಮತ್ತು 01-09-2008 ರಿಂದ 20-08-2010 9ನೇ ಎದುರುದಾರರು ಕಾರ್ಯನಿರ್ವಾಹಕ ಅಧಿಕಾರಿ, ತಾ.ಪಂ.ತುರುವೇಕೆರೆರವರು ದಿ:20-08-2010 ರಿಂದ 01-08-2012 ರವರೆಗೆ ಕಾರ್ಯನಿರ್ವಹಿಸಿರುತ್ತಾರೆ.

(ಎ) ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ತುರುವೇಕೆರೆ ರವರು ತಮ್ಮ ಪತ್ರ ಸಂಖ್ಯೆ:ಸಕಾಇಂ/ಪಂರಾಇಂ/ಉವಿ/ತುಕೆರೆ/ಎಸ್.ಪಿ/ಲೋ.ತುಮ240-41/2008-09, ದಿ:03-11-2008ರ ಪತ್ರದಲ್ಲಿ ದಂಡಿನಶಿವರ ಗ್ರಾಮದಲ್ಲಿ ಗ್ರಾಮಲೆಕ್ಕಿಗರ ವಸತಿಗೃಹ ನಿರ್ಮಿಸಲು 2 ಲಕ್ಷ ರೂಗಳಿಗೆ 2003-04ನೇ ಸಾಲಿನಲ್ಲಿ ಕಾರ್ಯನಿರ್ವಾಹಣಾಧಿಕಾರಿಗಳು, ತಾ.ಪಂ. ತುರುವೇಕೆರೆ ರವರು ಲೆಕ್ಕ ಶೀರ್ಷಿಕೆ ಆಹಾರ ಉಳಿತಾಯದ ಹಣದಲ್ಲಿ ಮಂಜೂರು ಮಾಡಿದ್ದು, ಈ ಕಟ್ಟಡದ ನಿರ್ಮಾಣ ಮಾಡಲು ಶ್ರೀ ಗಂಗಾಧರಯ್ಯ, ಜೆ. ಗುತ್ತಿಗೆದಾರರು, ತುರುವೇಕೆರೆ

ಇವರಿಗೆ ನೀಡಿರುತ್ತಾರೆ. ಗುತ್ತಿಗೆದಾರರು ದಂಡಿನಶಿವರದಲ್ಲಿ ಗ್ರಾಮಲೆಕ್ಕಿಗರ ವಸತಿಗೃಹ ನಿರ್ಮಾಣ ಕಾರ್ಯವನ್ನು ದಿ:15-04-2008 ರಂದು ಪ್ರಾರಂಭಿಸಿ ಲಿಂಟಲ್ ಲೆವೆಲ್‌ವರೆಗೆ ನಿರ್ಮಿಸಿ, ಮುಂದೆ ನಿರ್ಮಿಸದೆ ಕಾಮಗಾರಿ ಸ್ಥಗಿತಗೊಳಿಸಿರುತ್ತಾರೆಂದು ವರದಿಸಿರುತ್ತಾರೆ.

(ಏ) ವಸತಿ ಗೃಹಗಳ ನಿರ್ಮಾಣ ಕಾಮಗಾರಿಗೆ ಮಂಜೂರಾದ ರೂ. 2,00,000/-ಗಳಲ್ಲಿ ರೂ.1,41,642/- ಗಳನ್ನು ಗುತ್ತಿಗೆದಾರರಿಗೆ ನೀಡಿರುತ್ತಾರೆ. ಈ ಕಾಮಗಾರಿಯನ್ನು ಶ್ರೀ ಗೋಪಿನಾಥ್, ಕಿರಿಯ ಇಂಜಿನಿಯರ್ ರವರು ಇಲಾಖಾ ವತಿಯಿಂದ ನಿರ್ವಹಿಸಿರುತ್ತಾರೆಂದು ಮತ್ತು ಸದರಿ ಕಾಮಗಾರಿಗೆ ಸಂಬಂಧಿಸಿದ ಅಂದಾಜು ಪಟ್ಟಿ, ಕಾಮಗಾರಿಯ ದಾಖಲಾತಿಗಳನ್ನು ಲಗತ್ತಿಸಿ ಸಲ್ಲಿಸಿರುವುದಾಗಿ ತಿಳಿಸಿದ್ದರು. ಆದರೆ ಸದರಿ ಕಾಮಗಾರಿಯ ಅಂದಾಜು ಪಟ್ಟಿ ಕಾಮಗಾರಿಯ ವಿವರಗಳನ್ನು ಲಗತ್ತಿಸದೆ ಸಲ್ಲಿಸಿದ್ದರಿಂದ ದಿ:17-11-2008 ರಂದು ಮತ್ತೊಮ್ಮೆ ಪತ್ರ ವ್ಯವಹರಿಸಿ ದಾಖಲಾತಿಯನ್ನು ಒದಗಿಸಲು ಕೋರಿದ್ದರ ಮೇರೆಗೆ ಅವರು ತಮ್ಮ ಪತ್ರ ಸಂ:ಸಕಾಇಂ/ಪಂರಾಇಂ/ಉವಿ/ತುಕೆರೆ/ಕಿ.ಇಂ-3/ಲೋಕಾ/299/08-09,ದಿ:14-12-2008 ರಲ್ಲಿ ದಾಖಲಾತಿಗಳನ್ನು ಒದಗಿಸಿರುತ್ತಾರೆ. ಸದರಿ ಕಾಮಗಾರಿಗೆ 2010-2011 ರಲ್ಲಿ ಕಾಮಗಾರಿ ಪೂರ್ಣಗೊಳಿಸಲು ಅಂದಾಜು ಕೆಲಸದ ವೆಚ್ಚವನ್ನು ರೂ.3,00,000/- ಗಳಿಗೆ 2016 ರಲ್ಲಿ ಹೆಚ್ಚುವರಿಯಾಗಿ ಕೋರಿರುತ್ತಾರೆ.

(ಐ) ತನಿಖಾ ವರದಿಯಂತೆ ಒಟ್ಟು 2003-04 ರಲ್ಲಿ ಅಂದಾಜು ವೆಚ್ಚ ರೂ.2,00,000/-ಗಳು ಇದ್ದು ಇದರಲ್ಲಿ ರೂ.1,41,649/-ಗಳ ಕಟ್ಟಡದ ವೆಚ್ಚವಾಗಿರುತ್ತದೆ. ಹೆಚ್ಚುವರಿಯಾಗಿ 2010-11 ರಲ್ಲಿ ರೂ.1,70,000/- ಅನುದಾನವನ್ನು ಉಳಿದ ಕಟ್ಟಡವನ್ನು ಪೂರ್ಣಗೊಳಿಸಲು ಅಂದಾಜು ಪಟ್ಟಿ ತಯಾರಿಸಿ ರೂ.1,10.000/- ಗಳನ್ನು ಉಳಿದ ಕೆಲಸ ಪೂರ್ಣಗೊಳಿಸಲು ಬಳಸಿರುವ ಬಗ್ಗೆ ದಿ:25-08-2011 ರಲ್ಲಿ ವರದಿಸಿರುತ್ತಾರೆ.

(ಒ) 2010-11ರಲ್ಲಿ ರೂ.1,10,000/-ಗಳು ಬಿಡುಗಡೆಗೊಳಿಸದೆ 2016 ರಲ್ಲಿನ ಅಂದಾಜು ಬೇಡಿಕೆಯಂತೆ ರೂ.3,00,000/-ಗಳನ್ನು ಬಿಡುಗಡೆಗೊಳಿಸಲು ಯೋಜನೆ ರೂಪಿಸಿರುತ್ತಾರೆ. 2003-04 ರಿಂದ 2010-11 ರವರೆಗೆ ಕಾರ್ಯ ನಿರ್ವಹಿಸಿರುವ ಸಹಾಯಕ ಇಂಜಿನಿಯರ್ / ಕಿರಿಯ ಇಂಜಿನಿಯರ್ / ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಿ.ಆರ್.ಇ. ಉಪ ವಿಭಾಗ ಮತ್ತು ಕಾರ್ಯನಿರ್ವಾಹಕ ಅಧಿಕಾರಿ, ತಾ.ಪಂ. ತುರುವೇಕೆರೆ ಇವರೆಲ್ಲರೂ ಸಹ ಸದರಿ ಕಾಮಗಾರಿ ಪೂರ್ಣಗೊಳ್ಳದೆ ಮೂಲ ಮತ್ತು ಹೆಚ್ಚುವರಿ ಅಂದಾಜು ವೆಚ್ಚವಾಗಲು ಕಾರಣರಾಗಿರುತ್ತಾರೆ.ಈ ಬಗ್ಗೆ ಲೋಕಾಯುಕ್ತ ವರದಿಯಲ್ಲಿ ಯಾವುದೇ ಶಿಫಾರಸ್ಸು ಮಾಡಿರುವುದಿಲ್ಲ.

(ಓ) ಗ್ರಾಮ ಲೆಕ್ಕಿಗರ ವಸತಿ ಗೃಹದ ಕಟ್ಟಡ ಇದ್ದು ಸಾರ್ವಜನಿಕರ ಉಪಯೋಗಕ್ಕೆ ಬಾರದಂತೆ ಅದರಲ್ಲಿ ಗಿಡಗಂಟೆಗಳು ಸೊಪ್ಪುಸದೆ ಬೆಳೆದಿರುತ್ತದೆ. ಈ ವಿಷಯದ ಬಗ್ಗೆ ಪರಿಶೀಲನೆ ನಡೆಸಿ ತಪ್ಪಿತಸ್ಥರ ವಿರುದ್ಧ ದಾಖಲಾತಿಗಳನ್ನು ಕೋರಿರುತ್ತಾರೆ.

ಮೇಲ್ನೋಟಕ್ಕೆ ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 09ನೇ ಎದುರುದಾರರಾದ ಶ್ರೀ ಹೆಚ್.ಕೆ.ಪ್ರಕಾಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾ.ಪಂ. ತುರುವೇಕೆರೆ (ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು) ತುರುವೇಕೆರೆ, ಜಿ.ಪಂ.ವಿಭಾಗ ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಗಳು 1966ರ ನಿಯಮ 3(1)ರ (i), (ii)ಮತ್ತು (iii) ಅಡಿಯಲ್ಲಿ ದುರ್ನಡತೆ ಎಸಗಿದ್ದು, ಶಿಸ್ತು ಕ್ರಮಕ್ಕೆ ಬಾದ್ಯರಾಗಿರುವುದು ಕಂಡುಬಂದಿರುವುದರಿಂದ,ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಆಪಾದಿತ ಅಧಿಕಾರಿಯ ವಿರುದ್ಧ ಕರ್ತವ್ಯಲೋಪದ ಕುರಿತು ಶಿಸ್ತುಕ್ರಮ

ಕೈಗೊಳ್ಳಲು ಕರ್ನಾಟಕ ನಾಗರೀಕ ಸೇವಾ(ವನಿಮೇ) ನಿಯಮಗಳು, 1957ರ ನಿಯಮ-14(ಎ) ರಡಿಯಲ್ಲಿ 9ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಲುವಾಗಿ ಸದರಿ ನಿಯಮಗಳ ನಿಯಮ-14(ಎ) ರಡಿಯಲ್ಲಿ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ವಹಿಸಬೇಕೆಂದು ಕೋರಿರುತ್ತಾರೆ.

ಸದರಿ ಪ್ರಕರಣವನ್ನು ಪರಿಶೀಲಿಸಲಾಗಿ 09ನೇ ಎದುರುದಾರರಾದ ಶ್ರೀ ಹೆಚ್.ಕೆ.ಪ್ರಕಾಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ,ತಾ.ಪಂ.ತುರುವೇಕೆರೆ (ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು) ತುರುವೇಕೆರೆ, ಜಿ.ಪಂ.ವಿಭಾಗ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಸದರಿ ಅಧಿಕಾರಿಯು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1)ರ (i),(ii)ಮತ್ತು (iii) ಅಡಿಯಲ್ಲಿ ದುರ್ನಡತೆ ಎಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಮಾಡಿರುವ ಶಿಫಾರಸ್ಸಿನ ಅನ್ವಯ, ಆಪಾದಿತ ಅಧಿಕಾರಿಯ ವಿರುದ್ಧ ಕರ್ತವ್ಯಲೋಪದ ಕುರಿತು ಶಿಸ್ತುಕ್ರಮ ಕೈಗೊಳ್ಳಲು ಕರ್ನಾಟಕ ನಾಗರೀಕ ಸೇವಾ(ವನಿಮೇ) ನಿಯಮಗಳು, 1957ರ ನಿಯಮ-14(ಎ) ರಡಿಯಲ್ಲಿ 9ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಲುವಾಗಿ ಸದರಿ ನಿಯಮಗಳ ನಿಯಮ-14(ಎ) ರಡಿಯಲ್ಲಿ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರು, ಇವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 87 ವಿಸೇಬಿ 2017**
**ಬೆಂಗಳೂರು ದಿನಾಂಕ: 18-05-2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ಶ್ರೀ ಹೆಚ್.ಕೆ.ಪ್ರಕಾಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ,ತಾ.ಪಂ.ತುರುವೇಕೆರೆ (ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು) ತುರುವೇಕೆರೆ, ಜಿ.ಪಂ.ವಿಭಾಗ ವಿರುದ್ಧದ ಆರೋಪಗಳ ಸಂಬಂಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರನ್ವಯ ಸಮಗ್ರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ-14(ಎ)ರ ಪ್ರಕಾರ ಮಾನ್ಯ ಉಪ ಲೋಕಾಯುಕ್ತರು-2, ಕರ್ನಾಟಕ ಲೋಕಾಯುಕ್ತ ರವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್ ರಂಗನಗೌಡ) 18/05/2017
ಸರ್ಕಾರದ ಅಧೀನ ಕಾರ್ಯದರ್ಶಿ(ಸೇ-ಬಿ&ಸಿ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

ಇವರಿಗೆ,

1) ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ತುಮಕೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ,ಬಹುಮಹಡಿ ಕಟ್ಟಡ, ಬೆಂಗಳೂರು-01

ಪ್ರತಿ ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.